ಸಿ.ಸಿ .ನಂ. 159/2022 ಪಿಡಬ್ಲೂಃ 1

ದಿನಾಂಕಃ 29-08-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ಈ ಪ್ರಕರಣದಲ್ಲಿ ವೈಯಕ್ತಿಕ ಉದ್ದೇಶಕ್ಕಾಗಿ ಸಾಲವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ . ಸಾಲದ ಅರ್ಜಿಯಲ್ಲಿ ವಾಹನ ಖರೀದಿಸಲು ಸಾಲವನ್ನು ಪಡೆದಿದ್ದೇನೆ ಎಂದು ಬರೆದಿರುತ್ತಾರೆ . ಸದರಿ ವಾಹನ ಚೆವೆರ್ ಲೆಟ್ ಕಾರ್ ಆಗಿರುತ್ತದೆ . ಸದರಿ ಕಾರ್ ಸೆಕೆಂಡ್ ಹ್ಯಾಂಡ್ ಕಾರ್ ಆಗಿರುತ್ತದೆ . ಸದರಿ ವಾಹನದ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ . ಸದರಿ ವಾಹನದ ದಾಖಲೆಗಳನ್ನು ನಾವು ಪರಿಶೀಲನೆ ಮಾಡಿರುತ್ತೇವೆ ಎಂದರೆ ಸರಿ . ಸದರಿ ವಾಹನ ಮಹೇಶ್ವರ ಕರ್ಕಿಕರ ರವರ ಹೆಸರಿನಲ್ಲಿ ಇತ್ತು . ಸದರಿ ಮಹೇಶ ಕರ್ಕಿಕರ ನಮ್ಮ ಸಹಕಾರಿಯ ಸಾಲಗಾರರಾಗಿದ್ದರು . ಸದರಿ ಮಹೇಶ ಕರ್ಕಿಕರ ರವರು ನಮ್ಮ ಸಹಕಾರಿಯಲ್ಲಿ ವಾಹನ ಸಾಲವನ್ನು ಹೊಂದಿದ್ದರು . ಸದರಿ ವಾಹನ ಮೇಲೆ ಹೇಳಿದ ಚೆವೆರ್ ಲೆಟ್ ಕಾರ್ ಆಗಿರುತ್ತದೆ . ಮೇಲೆ ಹೇಳಿದ ವಾಹನವನ್ನು ನಾವು ಲೀಲಾವು ಮಾಡಿದಾಗ ಅದನ್ನು ಆರೋಪಿಯು ಖರೀದಿ ಮಾಡಿರುತ್ತಾರೆ . ಸದರಿ ಲಿಲಾವು ಪ್ರಕ್ರಿಯೆಯಲ್ಲಿ ಎಷ್ಟು ಜನ ಭಾಗವಹಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಆರೋಪಿಯ ಲಿಲಾವು ಪ್ರಕ್ರಿಯೆಯಲ್ಲಿ ಸದರಿ ವಾಹನವನ್ನು ಖರೀದಿ ಮಾಡಿರುತ್ತಾರೆ ಎಂದು ನೋಟಿಸಿನಲ್ಲಾಗಲೀ , ಫಿರ್ಯಾದಿಯಲ್ಲಾಗಲೀ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಹೇಳಿಲ್ಲ ಎಂದರೆ ಸರಿ . ಆ ರೀತಿ ಆರೋಪಿಯು ಸದರಿ ವಾಹನವನ್ನು ನಮ್ಮ ಸಹಕಾರಿಯವರು ಮಾಡಿರುವ ಲಿಲಾವು ಪ್ರಕ್ರಿಯೆಯಲ್ಲಿ ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ಈ ಕೇಸಿನಲ್ಲಿ ನಾವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . ಲಿಲಾವು ಪ್ರಕ್ರಿಯೆಯಲ್ಲಿ ಸದರಿ ವಾಹನವನ್ನು ಖರೀದಿ ಮಾಡಲು ಆರೋಪಿಯು ನಮ್ಮ ಸಹಕಾರಿಯಲ್ಲಿ ಸಾಲವನ್ನು ಪಡೆದದ್ದು ಸದರಿ ಸಾಲವನ್ನು ತೀರಿಸಲು ಈ ಕೇಸಿನ ಚೆಕ್ ನ್ನು ಕೊಟ್ಟಿರುತ್ತಾರೆ .

4. ಆ ರೀತಿ ನಮ್ಮ ಸಹಕಾರಿಯಲ್ಲಿ ಲಿಲಾವು ಪ್ರಕ್ರಿಯೆ ಆಗಿರುವ ಬಗ್ಗೆ ದಾಖಲೆಗಳು ಇವೆ ಎಂದರೆ ಸರಿ . ಸದರಿ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ಲಿಲಾವು ಪ್ರಕ್ರಿಯೆ ಆದ ನಂತರ ಸದರಿ ವಾಹನದ ಆರ್ ಸಿ ಯನ್ನು ಆರೋಪಿಯೇ ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ . ಆ ರೀತಿ ಆರೋಪಿಯು ಸದರಿ ಆರ್ ಸಿಯನ್ನು ತನ್ನ ಹೆಸರಿಗೆ ಯಾವಾಗ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ನಾವು ಒಂದು ವಾಹನವನ್ನು ಲಿಲಾವು ಮಾಡಿದ ಸಂದರ್ಭದಲ್ಲಿ ಸದರಿ ವಾಹನದ ಆರ್ ಸಿ ಯನ್ನು ಖರೀದಿದಾರರ ಹೆಸರಿಗೆ ವರ್ಗಾವಣೆ ಮಾಡಿಸುವುದು ನಮ್ಮ ಜವಾಬ್ದಾರಿ ಎಂದರೆ ಸಾಕ್ಷಿಯು ಅದು ಖರೀದಿದಾರರ ಜವಾಬ್ದಾರಿ ಎಂದು ನುಡಿಯುತ್ತಾರೆ . ಸದರಿ ವಾಹನದ ಕಬ್ಜಾವನ್ನು ಕೊಡುವುದು ನಮ್ಮ ಸಹಕಾರಿಯ ಜವಾಬ್ದಾರಿ ಎಂದರೆ ಸರಿ . ಆ ರೀತಿ ಲಿಲಾವು ಮಾಡಿದ ವಾಹನವನ್ನು ಖರೀದಿದಾರರ ಕಬ್ಜಾ ಕೊಟ್ಟ ಬಗ್ಗೆ ಅವರಿಂದ ದಾಖಲೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಅಂತಹ ದಾಖಲೆಯನ್ನು ನಾವು ಪಡೆದುಕೊಂಡಿರುತ್ತೇವೆ . ಸದರಿ ದಾಖಲೆಯನ್ನು ಸಹ ಈ ಕೇಸಿನಲ್ಲಿ ನಾವು ಹಾಜರು ಪಡಿಸಿಲ್ಲ ಎಂದರೆ ಸರಿ . ಸದರಿ ಲಿಲಾವು ಪ್ರಕ್ರಿಯೆ ನಡೆದ ದಿನಾಂಕ ನನಗೆ ನೆನಪಿಲ್ಲ .

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.